

ಇಡೀ ಜಗತ್ತು ಈ ಗಳಿಗೆಯಲ್ಲಿ ಕೊರೊನಾ ವೈರಸ್‌ನ ಬಿಗಿಮುಷ್ಟಿಯಲ್ಲಿದೆ. ಎಲ್ಲ ಮನೆಗಳೂ ಈಗ ಪರಪ್ಪನ ಅಗ್ರಹಾರದ ಮುಂದುವರಿದ ಜೈಲುಕೋಣೆಗಳಾಗಿವೆ. ಸದ್ಯಕ್ಕೆ ಕೊರೊನಾ ತಂದಿರುವ ಸಾವುನೋವುಗಳ ಸಂಖ್ಯೆಯನ್ನು ಎಣಿಸುವುದು ಬೇಡ. ಅದು ಹೈಜಂಪ್ ಮಾಡುತ್ತಲೇ ಇದೆ. ಆ ರೋಗಾಣು ಜಾಗತಿಕವಾಗಿ ತಂದಿರುವ ನಷ್ಟವನ್ನು 1ರ ಮುಂದೆ ಎಷ್ಟು ಸೊನ್ನೆಗಳನ್ನು ಹಾಕಿ ಲೆಕ್ಕಮಾಡಬೇಕೋ ತಿಳಿಯುತ್ತಿಲ್ಲ. ಶತ್ರುವಿನೊಡನೆ ಹೋರಾಡಬಹುದು; ಸಾವು ನೋವುಗಳು ಅಲ್ಲಿ ಅತ್ಯಂತ ಸಹಜ. ಇಲ್ಲಿ ನಾವು ಹೋರಾಡುತ್ತಿರುವುದು ಅಗೋಚರ ಶತ್ರುವಿನ ಮೇಲೆ. ಯಾವಾಗ ಎರಗುತ್ತದೋ ಅದನ್ನು ಕೂಡ ಭಯದಿಂದಲೇ ನೋಡಬೇಕು. ಮನೆಯಲ್ಲಿ ಖೈದಾಗಿ ಕೂತರೆ ಸದ್ಯಕ್ಕೆ ಯುದ್ಧವನ್ನು ಗೆಲ್ಲಬಹುದು. ಹೊಸ್ತಿಲನ್ನು ದಾಟಿದರೆ 'ಸೇಫ್' ಎನ್ನುವಂತಿಲ್ಲ. ನಮ್ಮ ಬದುಕು ಬಿಡಿ, ಮುಂದಿನ ಪೀಳಿಗೆಯ ಭವಿಷ್ಯ? ಎಂದು ವಿಹ್ವಲರಾಗಿ ಕೇಳುತ್ತಿದ್ದಾರೆ ವೃದ್ಧರು. ಯೂರೋಪಿನಲ್ಲಿ ವೃದ್ಧಾಶ್ರಮಗಳನ್ನು ಕೇರ್ ಮಾಡದೆ ಸಾಯಲು ಬಿಟ್ಟಿರುವ ಸಂಗತಿಗಳು ಒಂದಲ್ಲ ನೂರಾರು. ಈ ಸಂದರ್ಭದಲ್ಲಿ ಪ್ರಸಿದ್ಧ ನಟ ನಾನಾ ಪಾಟೇಕರ್‌ನ, 'ಯಶವಂತ್' ಚಿತ್ರದ ಡೈಲಾಗ್ ಮತ್ತೆ ಮತ್ತೆ ಅನುರಣಿಸುತ್ತಿದೆ 'ಏಕ್ ಮಚ್ಚರ್, ಸಾಲಾ, ಆದ್ಮಿಕೋ ಹಿಜ್ರಾ ಬನಾದೇತಾ ಹೈ' – ನನ್ ಮಗಂದು ಒಂದು ಸೊಳ್ಳೆ, ಮನುಷ್ಯನನ್ನು ಷಂಡನನ್ನಾಗಿ ಮಾಡಿಬಿಡುತ್ತದೆ. ಈಗ ಜಗತ್ತಿನ ಎಲ್ಲರ ಬಾಯಲ್ಲೂ ಕೊರೊನಾದೇ ಜಪ. ಇಡೀ ಪ್ರಪಂಚವನ್ನೇ ಬಂದ್ ಮಾಡಿದೆ.



ಇಂಥ ಸಾವು ನೋವಿನ ಸಂದರ್ಭಕ್ಕೆ ಜಗತ್ತು ಒಡ್ಡಿಕೊಂಡಿರುವಾಗ ಕೊರೊನಾ ವೈರಸ್ ಕೆಲವು ವಿಸ್ಮಯಗಳನ್ನೂ ನಮ್ಮ ಮುಂದೆ ತೆರೆದಿಟ್ಟಿದೆ. ಸೂತಕದ ನಡುವೆಯೂ ಜನ ಇದನ್ನು ಸವಿಯುತ್ತಿದ್ದಾರೆ. ಮೊದಲು ಮಾಲಿನ್ಯದ ಮಡುವಾಗಿ ರಾಡಿಯನ್ನು ಹೊತ್ತು ಹರಿಯುತ್ತಿದ್ದ ಯಮುನಾ ನದಿ, ಈಗ ಸ್ಪಟಿಕ ಸದೃಶ ನೀರನ್ನು ಹರಿಸುತ್ತಿದೆ. ಸ್ತಬ್ಧವಾದ ಕೈಗಾರಿಕೆಗಳು ಯಮುನೆಗೆ ಹೊಸಜೀವ ಕೊಟ್ಟಿದೆ. ವಾಟ್ಸ್ ಆ್ಯಪ್‌ನಲ್ಲಿ ಆ ಚಿತ್ರಗಳು ಧಾರಾಳವಾಗಿ ಹರಿದಾಡುತ್ತಿವೆ. ಒಂದು ವಾರದ ಹಿಂದಷ್ಟೇ ಪಂಜಾಬಿನ ಜಲಂಧರ್ ನಗರವಾಸಿಗಳು ಕಣ್ಣುಜ್ಜಿ ನೋಡಿದಾಗ ನಂಬದಾದರು. ಹಿಮಾಲಯದ ದೌಲಧರ್ ಶೃಂಗ ಮೈಮುರಿದು ನಿಂತಿರುವುದು ಸ್ಪಷ್ಟವಾಗಿ ಕಾಣಿಸಿತು. ಕೊರೊನಾದ ಭಯವನ್ನೂ ಮರೆತು 'ಕಣ್ಣು ಮುಟ್ಟಬೇಡಿ' ಎಂಬ ಸೂಚನೆಯನ್ನೂ ಕೊಡವಿ ಮತ್ತೆ ಮತ್ತೆ ಹಿಮಾಲಯದ ಆ ದೃಶ್ಯವನ್ನು ಕಣ್ಣುತುಂಬ ತುಂಬಿಕೊಂಡರು. ಜಲಂಧರ್ ಸುತ್ತಲೂ ವಾಯುಗೋಳ ಸದಾ ಮಾಲಿನ್ಯ ಕಣಗಳಿಂದ ತುಂಬಿ ಎದುರಿಗಿದ್ದವರೇ ಕಾಣದಷ್ಟು ದೂಳು ಸಂಚಯಿಸುತ್ತಿತ್ತು. ಹೊರಗೆ ವಾಹನಗಳ ಓಡಾಟವಿಲ್ಲ, ಜನಗಳು ಗೃಹಬಂಧಿ, ವಾಯುಗೋಳ ತನ್ನ ನಿಜಸ್ವರೂಪವನ್ನು ತೋರಿಸಿತ್ತು. ಕ್ರಿಕೆಟ್‌ಪಟು ಹರ್‌ಭಜನ ಸಿಂಗ್